
# ಬಾಹ್ಯಾಕಾಶದಲ್ಲಿ ಕೃಷಿ





■ **ಎನ್. ಶಂಕರ ರಾವ್**
ಕಲೆ: ಸಂತೋಷ್ ಸಸಿಹಿತ್ಲು

ಅಮ್ಮ ಇವತ್ತು ವೆಜಿಟೇಬಲ್ಸ್ ತುಂಬಾ ಫ್ರೆಶ್ ಆಗಿದೆ. ಇವೆಲ್ಲಾ ಎಲ್ಲಿಂದ ತರಿಸಿದೆ ಎಂದು ಕೇಳಿದ ಮಗನಿಗೆ ‘ಅದಾ ನೋಡು ಆ ಮಂಗಳ ಗ್ರಹದಿಂದಲ್ಲಿ ಇರುವ ನಮ್ಮ ಫಾರಂನಿಂದ ಬಂತು ಕಣೋ’ ಎಂದಳು ತಾಯಿ! ‘ಎಷ್ಟು ರುಚಿ ಆಗಿದೆ ಅಮ್ಮ, ಸಲಾಡ್ ಮಾಡಿ ಕೊಡು ನಮಗೆ’ ಎಂದು ತಾಯಿಯನ್ನು ಕೇಳಿದ ಮಗ.

ಈ ಅದ್ಭುತದ ರೂವಾರಿ ನಮ್ಮ ಅಸಾಮಾನ್ಯ ಹುಡುಗಿ ಅನುಷಾ!

ಅನುಷಾ ಯಂಗ್ ಸೈನ್ಸ್ ಎಕ್ಸ್‌ಪ್ಲೋರರ್. ಅವಳು **ISRO Kids Space Camp**ನಲ್ಲಿ ಟಾಪ್ ಪರ್ಫಾರ್ಮರ್. ಒಂದು ದಿನ ಅವಳಿಗೆ ಒಂದು ಅದ್ಭುತ ಯೋಚನೆ ಹೊಳೆಯಿತು.

‘ನಾವು ಸ್ಪೇಸ್ ಸ್ಟೇಷನ್‌ನಲ್ಲಿ ತರಕಾರಿ, ಆಹಾರಧಾನ್ಯ ಬೆಳೆಸಬಹುದೇ?’ ಅವಳ ಈ ಯೋಚನೆಯ ಹಿಂದೆ ಒಂದು ಕನಸು: ಭವಿಷ್ಯದ ಅಂತರಿಕ್ಷ ಯಾತ್ರಿಕರಿಗೆ ಫ್ರೆಶ್ ಆಹಾರ ನೀಡುವುದು. ಅನುಷಾ ತನ್ನ ಡ್ರಾಯಿಂಗ್ ಬುಕ್‌ನಲ್ಲಿ ಮೊದಲು ಚಿತ್ರ ಬರೆದಳು.

ಮೈಕ್ರೊಗ್ರಾವಿಟಿಯಲ್ಲಿಯೂ ಬೆಳೆಯಬಹುದಾದ ಸ್ಮಾರ್ಟ್ ಸಸ್ಯ ಬೀಜಕೋಶಗಳು, ಅವುಗಳಲ್ಲಿ ಜಲಜನಕ, ಮಣ್ಣು, ಎಲ್‌ಇಡಿ ಬೆಳಕು, ಇಂಗಾಲ ಸೆರೆಹಿಡಿಯುವ ಕವಚ ಮತ್ತು ಆಕ್ಸಿಜನ್ ನಿರ್ಗಮಿಸುವ ಸಿಂಡಿಕೇಶನ್ ಸಿಸ್ಟಮ್ ಇತ್ತು. ಅವಳು ತನ್ನ ವೈಜ್ಞಾನಿಕ ಯೋಚನೆಯನ್ನು ಶಾಲೆಯಲ್ಲಿ ತೋರಿಸಿ, ನಂತರ ವಿಜ್ಞಾನಿಗಳ ಮುಂದೆ ಪ್ರಸ್ತುತಪಡಿಸಿದಾಗ, ಎಲ್ಲರೂ ಅಚ್ಚರಿಪಟ್ಟರು. ಇಸ್ರೊ, ನಾಸಾ ಜೊತೆಗಿನ ‘ಮಿಷನ್ ಭೂಮಿ–9’ ಆರಂಭವಾಯಿತು.

ಚಂದ್ರ–7 ಹೆಸರಿನ ಒಂದು ಕ್ಯೂಬ್‌ಸ್ಯಾಟ್ ಗಾತ್ರದ ಸೂಪರ್ ಸ್ಪೇಸ್ ಲ್ಯಾಬ್ ಅನ್ವೇಷಣೆಗಾಗಿ ಕಳಿಸಲಾಯಿತು. ಅದರೊಳಗೆ ಅನುಷಾ ರೂಪಿಸಿದ ‘ಅಕ್ಕಿ ಪೆಡ್’ಗಳು ಇತ್ತು. ಪ್ರತಿದಿನವೂ ಆ ಪೆಡ್‌ಗಳಿಂದ ಹೊಸ ಕಾಂಡ ಹೊರಬರುತ್ತಿತ್ತು! ಎಲ್‌ಇಡಿ ಬೆಳಕಿನಲ್ಲಿ ದ್ಯುತಿಸಂಶ್ಲೇಷಣೆ ಕ್ರಿಯೆ ನಡೆದಿತ್ತು. ನೈಸರ್ಗಿಕ ಮಳೆಯಂತೆ, ನೀರನ್ನು ಆವರಣದಿಂದ ಸಂಗ್ರಹಿಸಿ, ಬೆಳೆಗಳಿಗೆ ಹಾಕಲಾಗುತ್ತಿತ್ತು.

ಒಂದು ತಿಂಗಳ ಬಳಿಕ, ಅದೇ ಅಕ್ಕಿಯಿಂದ ಮಾಡಿದ ಅಕ್ಕಿ ಉಪ್ಪಿಟ್ಟು ನಾಸಾ ಸ್ಟೇಷನ್‌ನಲ್ಲಿ ರುಚಿಯಾಗಿ ತಿನ್ನಲಾಯಿತು!

ಅನುಷಾ ಸಂಶೋಧನೆ ಇಡೀ ಭೂಮಿಗೆ ಆಶಾದೀಪವಾಯಿತು. ಅವಳ ಪುಟ್ಟ ಹೆಜ್ಜೆ ದಿಟ್ಟ ಹೆಜ್ಜೆಯಾಯಿತು. ಪ್ರತಿ ಮಕ್ಕಳಿಗೆ ಒಂದು ಸಂದೇಶ ಹೋಯಿತು.

ಕನಸುಗಳನ್ನು ನಕ್ಷತ್ರ, ಗ್ರಹಗಳವರೆಗೆ ಹಾರಿಸಬಹುದು. ಆದರೆ ಬುದ್ಧಿಯು ಅದರ ಎಂಜಿನ್ ಆಗಿರಬೇಕು.

ಇಂದು ಕೂಡಾ ಭೂಮಿ ಹಾಗೂ ಮಂಗಳ ಗ್ರಹದ ಯಾತ್ರಿಕರು ಅನುಷಾ ರೂಪಿಸಿದ ಝೀರೊ–ಜಿ ಕೃಷಿ ಪಾಡ್ಸ್ (Pods) ಬಳಸುತ್ತಿದ್ದಾರೆ.

ಅವಂತಿ ಎನ್ನುವ ಬಾಲಕಿ ನಕ್ಷತ್ರಗಳತ್ತ ನೋಡುವಾಗ ತಾಯಿ ಕೇಳಿದಳು. ‘ಏನ್ ನೋಡುತಿದ್ದೀಯಾ?’

ಅವಳು ‘ಅಕ್ಕಿ ಬೆಳೆಯುತ್ತಿರುವ ಆ ಬಿಳಿ ಜ್ಯೋತಿ. ಅಲ್ಲಿ ನನ್ನ ಕನಸು ಕೂಡ ಬೆಳೆಯುತ್ತಿದೆ ಅಮ್ಮ!’ എಂದು ಉತ್ತರಿಸಿದಳು. ■

## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.

**ವಿಳಾಸ:**
editorsu@sudha.co.in



ಪೂರ್ವಿ ಎನ್.
4ನೇ ತರಗತಿ,
ಅನಂತಗೀತಾ ವಿದ್ಯಾಲಯ,
ಮೈಸೂರು

